# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 476/2019

**ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಅನಿಲ್ ಕುಮಾರ್ | ಸಿಡಬ್ಲ್ಯೂ: 2 | ಪಿಡಬ್ಲ್ಯೂ: 3 |
| ತಂದೆಯ ಹೆಸರು | ಕೆ ಆರ್ ವೆಂಕಟೇಗೌಡ | | |
| ವಯಸ್ಸು | 42 ವರ್ಷ | | |
| ಕೆಲಸ | ವ್ಯವಸಾಯ, | | |
| ವಾಸಸ್ಥಳ | ಅಳಾಗೆರೆ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಿಪಿ-1 ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ವತ್ತುಗಳ ಪಟ್ಟಿಯಲ್ಲಿ ಮತ್ತು ಮಾದರಿ ಸೀಲಿನ ನಕಲಿನಲ್ಲಿ ತನ್ನ ಸಹಿಗಳನ್ನು ಗುರುತಿಸಿದ್ದು , ಸದರಿ ದಾಖಲೆಗಳನ್ನು ನಿಪಿ-2 ಮತ್ತು 3 ಎಂದು , ಸಾಕ್ಷಿಯ ಸಹಿಗಳನ್ನು ನಿಪಿ-2 (ಎ) ಮತ್ತು ನಿಪಿ-3 (ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸುಮಾರು 6-7 ವರ್ಷಗಳ ಹಿಂದೆ ವಕೀಲರ ಕಛೇರಿಯಲ್ಲಿ ಮಾಡಿದ್ದೇನೆ. ನನ್ನ ಸಮಕ್ಷಮ ಅಬಕಾರಿ ಅಧಿಕಾರಿಗಳು ಯಾವುದೇ ವಸ್ತುಗಳನ್ನು ಮತ್ತು ಸೇಂದಿಯನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಅದಕ್ಕೆ ಸಂಬಂಧಿಸಿದಂತೆ ನನ್ನ ಮುಂದೆ ಯಾವುದೇ ಬರವಣಿಗೆಯನ್ನು ಮಾಡಿಲ್ಲ. ನಿಪಿ-1 ರಿಂದ 3 ರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಮು ಮಾ-1 ರಿಂದ 4 ನ್ನು ಈ ಹಿಂದೆ ನೋಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ ಮತ್ತು ಈ ಹಿಂದೆ ಆತನನ್ನು ನಾನು ನೋಡಿಲ್ಲ. ನಾನು ಸಹಿ ಹಾಕುವಾಗ ನನ್ನ ಜೊತೆ ಬೇರೆ ಯಾರು ಇರಲಿಲ್ಲ.

ಸದರಿ ಸಹಿಯನ್ನು ರಾತ್ರಿ 7 ರಿಂದ 8 ಗಂಟೆಯ ಸಮಯದಲ್ಲಿ ಹಾಕ್ಕಿದ್ದೇನೆ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿನಾಂಕಃ 13.03.2019 ರಂದು ಮಧ್ಯಾಹ್ನ ಸುಮಾರು 1.30 ಕ್ಕೆ ಅಬಕಾರಿ ಅಧಿಕಾರಿಗಳು ಕಿರಿಜಾಜಿ ಯಿಂದ ಹುಣಸೂರು ಕಡೆಗೆ ಹೋಗುವ ರಸ್ತೆಯಲಿಲ ಅಂದರೆ ಸಿದ್ದಯ್ಯನ ಕೊಪ್ಪಲು ಗ್ರಾಮದ ಕಡೆಗೆ ಹೋಗುವ ರಸ್ತೆ ಬದಿಯಲ್ಲಿರುವ ಸೇತುವೆ ಸಮೀಪ ಗಸ್ತು ಮಾಡುತ್ತಿದ್ದಾಗ ಒಬ್ಬ ವ್ಯಕ್ತಿ ಯಾವುದೇ ಪರವಾನಗಿ ಇಲ್ಲದೇ ತನ್ನ ವಾಹನದಲ್ಲಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದಾನೆ ಅದನ್ನು ಜಪ್ತು ಮಾಡುವ ಸಲುವಾಗಿ ಪಂಚರಾಗಿ ಸಹಕರಿಸುವಂತೆ ನನ್ನನ್ನು ಮತ್ತು ಚಾಸಾ-1 ರವರನ್ನು ಕೋರಿಕೊಂಡ ಮೇರೆಗೆ ನಾವಿಬ್ಬರೂ ಒಪ್ಪಿದೆವು ಎಂದರೆ ಸರಿಯಲ್ಲ. ನಂತರ ಅಬಕಾರಿ ಅಧಿಕಾರಿಗಳು ನಮ್ಮ ಸಮಕ್ಷಮ ಟಿಎನ್ 58 ಸಿ 3325 ರ ಸುಜುಕಿ ಮ್ಯಾಕ್ಸ್ 100 ವಾಹನದಲ್ಲಿದ್ದ ತಲಾ 35 ಲೀ ಸಾಮರ್ಥ್ಯದ 2 ಕ್ಯಾನ್ ಗಳನ್ನು ತೆರೆದು ನೋಡಿದಾಗ ಅದರಲ್ಲಿ ತಲಾ 35 ಲೀ . ನಷ್ಟು ಸೇಂದಿ ಪತ್ತೆಯಾಯಿತು ಎಂದರೆ ಸರಿಯಲ್ಲ. ಸದರಿ ಸೇಂದಿಯನ್ನು ವಾಹನದ ಸಮೇತ ಅಬಕಾರಿ ಅಧಿಕಾರಿಗಳು ವಶಕ್ಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಸೇಂದಿಯಿಂದ ತಲಾ1 ಲೀಟರ್ ನಷ್ಟು ಸೇಂದಿಯನ್ನು 2 ಪ್ಲಾಸ್ಟಿಕ್ ಕ್ಯಾನ್ ಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಲಾಯಿತು ಎಂದರೆ ಸರಿಯಲ್ಲ. ಅದನ್ನು ಬಿಳಿ ಬಣ್ಣದ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಮೊಹರು ಮಾಡಲಾಯಿತು ಎಂದರೆ

ಸರಿಯಲ್ಲ. ಈ ಬಗ್ಗೆ ಮಧ್ಯಾಹ್ನ 1.50 ರಿಂದ 2.30 ರವರೆಗೆ ನಿಪಿ-1 ರ ಮಹಜರು ಕ್ರಮವನ್ನು ಜರುಗಿಸಿ ನಿಪಿ-2 ರ ಸ್ವತ್ತಿನ ಪಟ್ಟಿಯನ್ನು ತಯಾರಿಸಿ ನಿಪಿ-3 ರಂತೆ ಮಾದರಿ ಸೀಲಿನ ನಕಲನ್ನು ತಯಾರಿಸಿ ನಮ್ಮ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಲ್ ಕೆ ಜೆ ಪರ ಶ್ರೀ ಎಸ್ ಎಂ ಜೆ ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.